Regd No B G 155 ಶ್ರೀ 6-2-1970

SATYAVADI Daily, MYSORE 4 ‡ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಪ್ರಕಟಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಗಡಿನಾಡು ಗಾಂಧಿಗೆ ಅಪಾರ ಬಹುಮಾನ ನೀಡಿಕೆ

ಪುರಸಭೆ

ಮೈಸೂರು— 1970 ನೇ ಜನವರಿ ಮಾಹೆಯ ಮುಂದುವರಿದ ಪುರಸಭಾಧಿವೇಶನವು 1970 ನೇ ಫೆಬ್ರವರಿ ಮಾಹೆ ದಿನಾಂಕ 9 ನೇ ಸೋಮವಾರ ಮಧ್ಯಾಹ್ನ ತ್ಪರ 4 ಗಂಟೆಗೆ ನಡೆಯುವುದಾಗಿದೆ.

○

ತಮಿಳು ಚಿತ್ರ

ಕೋಲಾರ— ಕನ್ನಡ ವಿದ್ಯಾರ್ಥಿಗಳ ಪ್ರತಿಭಟನೆಗಾಗಿ ನಿನ್ನೆ ಇಲ್ಲಿಯ ಚಿತ್ರ ಮಂದಿರದಲ್ಲಿ ನಿನ್ನೆ ತಮಿಳು ಚಿತ್ರ ಪ್ರದರ್ಶಿಸಲಿಲ್ಲ.

★

ರೇಸಸ್

ಮೈಸೂರು— ಸೆಲ್ವಂ ಕುದುರೆ ಜಾಕಿ ರೊಜಾರಿಯೋಗೆ ರೂ 20 ಜುಲ್ಮಾನೆ ಹಾಕಲಾಯಿತು : ಕಾರ್ಲಿನ ಜಾಕಿಗೆ ತೀಪ್ರವಾಗಿ ಎಚ್ಚರಿಕೆ ಕೊಡಲಾಯಿತು ; ಲಕ್ಕೀ ಬೇಬಿ ಜಾಕಿ ಸರ್ದಾರ್‌ಗೆ ರೂ. 20 ಜುಲ್ಮಾನೆ ವಿಧಿಸಲಾಯಿತು.

5 ವಿಧದ ಸಮಾಜವಾದ

ಬರೋಡ— ನಾರದ ಸಮಾಜವಾದಿ, ತಿಂಗಳ ಸಮಾಜವಾದಿ, ನಿಯತಕಾಲಿಕ ಸಮಾಜವಾದಿ, ಸನ್ಮೋಳನ ಪ್ರಜಾವಾದಿ, ಸಮಾರಂಭ ಸಮಾಜವಾದಿಗಳೆಂದು 5 ವಿಧದ ಸಮಾಜವಾದಿಗಳಿರುವರೆಂದೂ ಆದರೆ ಪಿಎಸ್ಪಿ ಮಾತ್ರ ವರ್ಷದ 365 ದಿನಗಳ ಸಮಾಜವಾದಿಯೆಂದ ಶ್ರೀ ನಾಥ್ ಪೈ ಹೇಳಿದರು.

★

ವ್ಯಾಪಾರದಲ್ಲಿ ಇಳಿತಾಯ

ಶಿವಮೊಗ್ಗ— ಭದ್ರಾವತಿ–ಶಿವಮೊಗ್ಗ ಒಟ್ಟಾರೆ ಸ್ಟೋರ್ಸಿನಲ್ಲಿ ದಿನದ ವ್ಯಾಪಾರ ರೂ 200 ರಿಂದ ರೂ 50 ಕ್ಕೆ ಇಳಿದಿದೆ ಎಂದು ಹೇಳಲಾಗಿದೆ.

○

ಸಂಸ್ಕೃತ ವಿಶ್ವವಿದ್ಯಾಲಯ

ಭುವನೇಶ್ವರ— ಸಂಸ್ಕೃತ ಭಾಷಾ ಮತ್ತು ಸಾಹಿತ್ಯದ ವ್ಯಾಸಂಗ ಮತ್ತು ಸಂಶೋಧನೆಗಾಗಿ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪಿಸಲು ಒರಿಸ್ಸಾ ಸರಕಾರ ನಿರ್ಧರಿಸಿದೆ

ಬಾದ್‌ಷಾಖಾನರಿಗೆ ಅಪಾರ ಬಹುಮಾನ

ನವದೆಹಲಿ— ಭಾರತದಲ್ಲಿ 4 ತಿಂಗಳ ಕಾಲ ಪ್ರವಾಸ ಮಾಡಿದ ಖಾನ್ ಅಬ್ದುಲ್ ಗಫಾರ್ ಖಾನರು ಬೈರೂಟ್ ಮಾರ್ಗವಾಗಿ ಕಾಬೂಲಿಗೆ ವಿಮಾನದಲ್ಲಿ ಭಾನುವಾರ ಪ್ರಯಾಣಮಾಡುವರು – ನೆರೆ ದೇಶಗಳ ಮೈತ್ರಿ ಸಂಪಾದಿಸಲು ಜದರು ಉಭಯತಾಪಿ ನಂಬಿಕೆಯಿಟ್ಟುಕೊಂಡು ಹಿಂಸಾಕೃತ್ಯ ಮುಕ್ತಾಯಗೊಳಿಸಬೇಕೆಂದು ಹೇಳಿದರು – ಖಾನರನಿಗೆ ಇಲ್ಲಿ ದೊರೆತ ಬಹುಮಾನಗಳು ಅರ್ಧ ಕ್ವಿಂಟಾಲಿಂದ 1 ಕ್ವಿಂಟಾಲು ತೂಕದ್ದು 7 ಪೆಟ್ಟಿಗೆಗಳನ್ನು ಆಗಲೇ ಕಾಬೂಲಿಗೆ ರವಾನಿಸಲಾಗಿದೆ – ನಿನ್ನೆಯೂ ಒಂದು ಪೆಟ್ಟಿಗೆ ಕಳುಹಿಸುವ ಏರ್ಪಾಡಿತ್ತು – ಅವರಿಗೆ ಲಕ್ಷಾಂತರ ರೂ ಪಾಯಿಗಳು ದೊರೆಯಿತು – ಅವರಿಗೆ ದೊರೆತ ಬಹುಮಾನಗಳಲ್ಲಿ ಎರಡು ಯ್ಯಾಂಪ್ಲಿಫಯರ್ ಸೆಟ್ಟುಗಳೂ ಇವೆ.

★

ಹಿತಬೋಧೆ

ತಿರುಪತಿ— ತಿರುಪತಿ ಮುಂತಾದ ಯಾತ್ರಾಸ್ಥಳಗಳು ಜನರು ವ್ಯಾಜ್ಯಮಾಡದಂತೆ, ಸುಳ್ಳು ಹೇಳದಂತೆ ಪ್ರತಿಜ್ಞೆ ಸ್ವೀಕರಿಗೊಳಿಸಿ, ಕೋರ್ಟುಗಳ ಇರುವಿಕೆಯೇ ಅನಾವಶ್ಯಕವಾಗಿ ಮಾಡಬೇಕೆಂದು ಆಂಧ್ರ ಪ್ರದೇಶದ ಹೈಕೋರ್ಟು ಜಡ್ಜರು ಶ್ರೀ ವೆಂಕಟೇಶ್ವರನವರು ಇಲ್ಲಿಯ ವಕೀಲ್ ಸಂಘದವರು ಅರ್ಪಿಸಿದ ಬಿಣ್ಣವತ್ತಳಿಗೆ ಕೊಟ್ಟ ಉತ್ತರದಲ್ಲಿ ತಿಳಿಸಿದರು

○

ರಾಷ್ಟ್ರಾಧ್ಯಕ್ಷರಿಗೆ ಆಹ್ವಾನ

ಭದ್ರಾಚಲ— ಇಲ್ಲಿ ಏಪ್ರಿಲ್ 15 ರಂದು ನಡೆಯುವ ಶ್ರೀ ರಾಮನವಮಿ ಉತ್ಸವಕ್ಕೆ ರಾಷ್ಟ್ರಾಧ್ಯಕ್ಷ ಶ್ರೀ ವಿ ವಿ ಗಿರಿಯವರನ್ನು ಆಹ್ವಾನಿಸಲು ದೇವಸ್ಥಾನದ ಧರ್ಮದರ್ಶಿಗಳು ನಿರ್ಧರಿಸಿರುವರು.

ಇದೊಂದು ತೆರಿಗೆ

ನವದೆಹಲಿ— ವ್ಯವಸಾಯ ಸಂಪತ್ತು ಲೆವಿಯನ್ನು ಸರಕಾರ ಜಾರಿಯಲ್ಲಿ ತರಲಿದೆ – ಭೂಮಿ ಬೆಲೆ ಕಟ್ಟುವವರನ್ನು ನೇಮಿಸಲು ಪ್ರಾರಂಭಿಸಿದೆ – ಇದರಿಂದ ವರ್ಷಕ್ಕೆ ರೂ. 5 ಕೋಟಿ ಆದಾಯ ಬರುವ ನಿರೀಕ್ಷೆ ಇದೆಯೆಂದು ಹೇಳಲಾಗಿದೆ.

●

ಗಡಿ ವಿಷಯದಲ್ಲಿ

ಬೊಂಬಾಯಿ— ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿಯು (ಹೊಸ) ಹೊಸ ಕಾಂಗ್ರೆಸ್ಸಿನ ಆರ್ಥಿಕ ನೀತಿ ಜಾರಿಗೆ ತರುವ ರೀತಿಯನ್ನು ತಾ|| 19 ರ ಮಾಟಿಂಗಿನಲ್ಲಿ ಪರ್ಯಾಲೋಚಿಸುವುದು – ಮೈಸೂರು-ಮಹಾರಾಷ್ಟ್ರ ಗಡಿ ವ್ಯಾಜ್ಯವನ್ನು ಚರ್ಚಿಸುವುದು – ಅಧ್ಯಕ್ಷ ಗಿರಿಯವರನ್ನು ಈ ಸಂಬಂಧವಾಗಿ ಪಾರ್ಲಿಮೆಂಟು ಸದಸ್ಯರ ನಿಯೋಗವೊಂದು ಕಾಣುವ ಸಂಭವವಿದೆ.

○

ಜಂಬೊ ವಿಮಾನ ಕೊಳ್ಳಲು

ವಾಷಿಂಗ್ಟನ್— ಭಾರತಕ್ಕೆ ಜಂಬೊ ವಿಮಾನ ಕೊಳ್ಳಲು 18 ಮಿಲಿಯ ಡಾಲರು ಸಾಲ ಕೊಡುವ ಒಪ್ಪಂದಕ್ಕೆ ರಫ್ತು–ಆಮದು ಬ್ಯಾಂಕಿನಲ್ಲಿ ರುಜುವಾಯಿತು.

★

ತಾ. 6–2–70 ನೇ ಶುಕ್ರವಾರದಿಂದ ಪ್ರಾರಂಭ

ದೇವೇಂದ್ರ ಗೋಯಲ್‌ರವರ ಅತ್ಯುತ್ತಮ ಸಾಮಾಜಿಕ ಚಿತ್ರ

ಏಕ್ ಫೂಲ್ ದೋ ಮಾಲಿ

(ಕಲರ್‌ನಲ್ಲಿ)

ನಿರ್ದೇಶನ ದೇವೇಂದ್ರ ಗೋಯಲ್ ಸಂಗೀತ ರವಿ

ಪಾತ್ರ: ಸಂಜಯ್, ಸಾಧನ ಮತ್ತು ಬಲ್‌ರಾಜ್ ಸಹಾನಿ

ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರದಲ್ಲಿ

ಪ್ರತಿದಿನ 2–30, 6 ಮತ್ತು 9–30 ಕ್ಕೆ ‡ 2–45, 6–30 ಮತ್ತು 10 ಕ್ಕೆ

ಶ್ರೀ ಚಿತ್ರಮಂದಿರ

ಹೊಸ ಯಂತ್ರೋಪಕರಣ, ಪ್ಲಾಸ್ಟಿಕ್ ಸಿಲ್ವರ್ ಸ್ಕ್ರೀನ್ ಮತ್ತು ಸುಖಾಸನಗಳಿಂದ ಸಜ್ಜುಗೊಳಿಸಲಾಗಿದೆ

ಅಪೆರಾ ಇಂದಿನಿಂದ ಪಾರ್ ಶಿ ಹಿ ಪಾರ್ ಶಿ

ಇನ್ನೊಂದು ರೀತಿಯ ಸತಿ

ಈಚೆಗೆ ನಡೆದ ವಿಷಯ. ಕಲ್ಕತ್ತಾದ ಗೋಪಾಲ ಮಾಲಿಕ್ ಗಲ್ಲಿಯಲ್ಲಿದ್ದ ಮಾನಿ ಸಿನ್ಹರ ನಿಧನದಿಂದ ನೃವಸಾಕ್ರಾಂತಳಾದ ನುತ್ತು ಗಂಡನ ಅಗಲುವಿಕೆಯನ್ನು ಹಿಸಲಾರಳಾದ ಆತನ ಪತ್ನಿಯು ಕಲ್ಕತ್ತಾ ವಿಶ್ವವಿದ್ಯಾಲಯದ ದರ್ಭಂಗಾ ಕಟ್ಟಡ ಮೇಲಿಂದ ಬಿದ್ದು ಪ್ರಾಣತ್ಯಾಗ ಮಾಡಿದಳು.

ಚೋಳರ ಕಾಲದ ಫಿರಂಗಿ ಗುಂಡು

ತಂಜಾವೂರು— ಒಂದು ದೇವಾಲಯದಲ್ಲಿ 1000 ಫಿರಂಗಿ ಗುಂಡುಗಳನ್ನು ಪುರಾತನ ವಸ್ತುಗಳ ಸಂಶೋಧಕರು ಪತ್ತೆ ಮಾಡಿರುವರು – ಚೋಳರ ಕಾಲದ ಇವು ಕಲ್ಲಿನದಾಗಿದ್ದು 2 ಮಾಟರಿಂದ 6 ಮಾಟರು ಸುತ್ತಮುತ್ತ ಅಳತೆಯುಳ್ಳದ್ದಾಗಿದೆ.

ರಕ್ತ ದಾನ

ನವದೆಹಲಿ— ಭಾರತಕ್ಕೆ ವರ್ಷಕ್ಕೆ 50 ಲಕ್ಷ ಯೂನಿಟ್ ರಕ್ತ ಬೇಕಾಗಿದೆ. ಈಗ 2.5 ಲಕ್ಷ ಯೂನಿಟ್ ಪಡೆಯುತ್ತಿಯೆಂದೂ, ಹೆಚ್ಚು ರಕ್ತ ದಾನ ಅವಶ್ಯಕ ವೆಂದೂ ಹೇಳಲಾಗಿದೆ.

ಜೂಜಿನ ಕುದುರೆಗಳ ಮಾರಾಟ

ಬೊಂಬಾಯಿ— 38 ಜೂಜಿನ ಕುದುರೆಗಳು ವಾರ್ಷಿಕ ಕುದುರೆ ಹರಾಜಿನ ಪ್ರಥಮದಿನವಾದ ಮೊನ್ನೆ ರೂ 1013500 ಗಳಿಗೆ ಮಾರಲಾಯಿತು.

ಷೂಟಿಂಗ್ ಸ್ಪರ್ಧೆ

ನವದೆಹಲಿ— ಈ ವರ್ಷದ ರಾಷ್ಟ್ರೀಯ ಷೂಟಿಂಗು ಸ್ಪರ್ಧೆಗೆ ಯಾವ ರಾಜ್ಯ ಗಳ ಸಂಘಗಳೂ ಸೇರಿಲ್ಲವಾಗಿ ರಾಷ್ಟ್ರೀಯ ರೈಫಲ್ ಸಂಘ ಬಿಕ್ಕಟ್ಟಿನಲ್ಲಿ ಸಿಕ್ಕಿದೆ.

Help The Gorakshana



Protect the Cow

ಗೋರಕ್ಷಣೆ ವ.ತು, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲೆ
ಗೋರಕ್ಷಣಕ್ಕೆ ಬೆಂಬಲ ನೀಡಿ

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

Quality Printing — Neat Binding

Lakshminarasimha Press

Sivarampet, Mysore

ಪುರಾಣಾಂಡ್ ಅಮೋಘ 6 ನೇ ವಾರ

ಶಿನಿ ಅಮೋಘ ಪ್ರಾರಂಭ

.... ತುಂಬಿದ ಚಿತ್ರಮಂದಿರಕ್ಕೆ ಪ್ರದರ್ಶಿತವಾಗುತ್ತಿದೆ ....

ಒರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ನಟವರ್ಗ– ಕಲ್ಪನ, ಅಶ್ವಥ್, ಬಾಲಕೃಷ್ಣ, ಪಂಡರಿಬಾಯಿ

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 3ನೇ ವಾರ

.... ಅತ್ಯಮೋಘ ಕನ್ನಡ ಚಿತ್ರ ....

ಛಲೇ ಕಿಲಾಡಿ

ಪಾತ್ರ : ನರಸಿಂಹರಾಜು ರಂಗ ವೆಂಕಟೇಶ್

ಕಥೆ – ಸಂಭಾಷಣೆ : ಹುಣಸೂರ್ ಕೃಷ್ಣಮೂರ್ತಿ

ದಿಗ್ದರ್ಶನ : ಎ. ನಾಗೇರಾಜ್

ದಿನ 3 ಆಟಗಳು

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ

ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ 10-00

ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1. ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂ
2. ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.
3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿಡಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
ಗೋರಕ್ಷಣ ಆಫೀಸ್, ಸತ್ಯವಾದಿಪ್ರೆಸ್ ಚಾಮರಾಜಪುರಂ, ಮೈಸೂರು 4

SHAKTI

SUDHA

A Superb Tonic

Edited Printed Published by Dharmaprachara Nirata
M S Krishna Rao (Proprietor) at the Satyavadi Press
Chamarajapuram, Mysore 4